ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 18-01-2003.

# *ಬ್ರಾಹ್ಮಣ ಜನ್ಮದ ಸ್ಮೃತಿಗಳ ಮುಖಾಂತರ ಸಮರ್ಥರಾಗಿ ಸರ್ವರನ್ನು ಸಮರ್ಥರನ್ನಾಗಿ ತಯಾರು ಮಾಡಿರಿ*

(ब्राहमण जन्म की स्मृतियों द्वारा समर्थ बन सर्व को समर्थ बनाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ನಾಲ್ಕೂ ಕಡೆಯ ಸರ್ವ ಸ್ನೇಹಿ ಮಕ್ಕಳ ಸ್ನೇಹದ ಮಧುರಾತಿ ಮಧುರ ನೆನಪಿನ ಭಿನ್ನ-ಭಿನ್ನವಾದ ಮಾತು, ಸ್ನೇಹದ ಮುತ್ತುಗಳ ಮಾಲೆಯು ಬಾಪ್‌ದಾದಾರವರ ಬಳಿ ಅಮೃತವೇಳೆಗೆ ಮೊದಲೇ ತಲುಪಿತ್ತು. ಮಕ್ಕಳ ಸ್ನೇಹ ಬಾಪ್‌ದಾದಾರವರನ್ನು ಸ್ನೇಹದ ಸಾಗರದಲ್ಲಿ ಸಮಾವೇಶ ಮಾಡುತ್ತದೆ. ಪ್ರತಿಯೊಬ್ಬ ಮಕ್ಕಳಲ್ಲಿ ಸ್ನೇಹದ ಶಕ್ತಿಯು ಅಪಾರವಾಗಿದೆ ಎನ್ನುವುದನ್ನು ಬಾಪ್‌ದಾದಾರವರು ನೋಡಿದರು. ಈ ಸ್ನೇಹದ ಶಕ್ತಿ ಪ್ರತಿಯೊಂದು ಮಗುವನ್ನು ಸಹಜಯೋಗಿಯನ್ನಾಗಿ ಮಾಡುತ್ತದೆ. ಸ್ನೇಹದ ಆಧಾರದಿಂದ ಸರ್ವ ಆಕರ್ಷಣೆಗಳಿಂದ ಭಿನ್ನರಾಗಿ ಮುಂದೆ ನಡೆಯುತ್ತಿದ್ದೀರಿ. ಬಾಪ್‌ದಾದಾ ಹಾಗೂ ವಿಶೇಷ ಆತ್ಮರ ಮುಖಾಂತರ ಅತೀತ ಮತ್ತು ಪ್ರೀತಿಯ ಸ್ನೇಹದ ಅನುಭವ ಆಗುತ್ತಿಲ್ಲ ಎಂದು ಹೇಳುವ ಯಾವ ಒಬ್ಬ ಮಗುವನ್ನೂ ನೋಡಿಲ್ಲ. ಪ್ರತಿಯೊಬ್ಬ ಬ್ರಾಹ್ಮಣ ಆತ್ಮನ, ಬ್ರಾಹ್ಮಣ ಜೀವನದ ಆದಿ ಕಾಲ ಸ್ನೇಹದ ಶಕ್ತಿಯ ಮುಖಾಂತರವೇ ಆಗಿದೆ. ಬ್ರಾಹ್ಮಣ ಜನ್ಮದಲ್ಲಿ ಈ ಸ್ನೇಹದ ಶಕ್ತಿ ವರದಾನವಾಗಿ ಮುಂದುವರೆಸುತ್ತದೆ. ಆದ್ದರಿಂದ ಇಂದಿನ ದಿನ ವಿಶೇಷ ತಂದೆ ಮತ್ತು ಮಕ್ಕಳ ಸ್ನೇಹದ ದಿನವಾಗಿದೆ. ಪ್ರತಿಯೊಬ್ಬರು ತಮ್ಮ ಮನಸ್ಸಿನಲ್ಲಿ ಬಹಳ-ಬಹಳ ಸ್ನೇಹದ ಮುತ್ತುಗಳ ಮಾಲೆಯನ್ನು ಬಾಪ್‌ದಾದಾರವರಿಗೆ ತೊಡಿಸಿದಿರಿ ಮತ್ತು ಶಕ್ತಿಗಳು ಇಂದಿನ ದಿನ ಗುಪ್ತವಾಗಿವೆ. ಆದರೆ ಸ್ನೇಹದ ಶಕ್ತಿ ಪ್ರತ್ಯಕ್ಷವಾಗಿದೆ. ಬಾಪ್‌ದಾದಾ ಮಕ್ಕಳ ಸ್ನೇಹದ ಸಾಗರದಲ್ಲಿ ತಲ್ಲೀನರಾಗಿದ್ದಾರೆ(ಲೀನ).

ಇಂದಿನ ದಿನ ಸ್ಮೃತಿಯ ದಿವಸವಾಗಿದೆ ಎಂದು ಹೇಳುತ್ತೀರಿ. ಸ್ಮೃತಿಯ ದಿವಸ ಕೇವಲ ಬ್ರಹ್ಮಾತಂದೆಯ ಸ್ಮೃತಿಯ ದಿವಸವಲ್ಲ ಆದರೆ ಬಾಪ್‌ದಾದಾ ಹೇಳುತ್ತಾರೆ ಇಂದು ಮತ್ತು ಸದಾ ನೆನಪು ಇಟ್ಟುಕೊಳ್ಳಬೇಕು. ಬಾಪ್‌ದಾದಾ ಬ್ರಾಹ್ಮಣ ಜನ್ಮವನ್ನು ತೆಗುದುಕೊಳ್ಳತ್ತಲೇ ಆದಿಯಿಂದ ಇಲ್ಲಿಯತನಕ ಯಾವ-ಯಾವ ಸ್ಮೃತಿಗಳನ್ನು ಕೊಟ್ಟಿದ್ದಾರೆಯೋ ಆ ಸ್ಮೃತಿಗಳ ಮಾಲೆಯನ್ನು ನೆನಪು ಮಾಡಿ, ಬಹಳ ದೊಡ್ಡ ಮಾಲೆಯಾಗುತ್ತದೆಯಲ್ಲವೇ. ಎಲ್ಲರಿಗೂ ಎಲ್ಲದಕ್ಕಿಂತ ಮೊದಲನೆಯದಾಗಿ ಯಾವ ಸ್ಮೃತಿ ಸಿಕ್ಕಿದೆ? ಮೊದಲನೆಯ ಪಾಠ ನೆನಪು ಇದೆಯಲ್ಲವೇ! ನಾನು ಯಾರು? ಈ ಸ್ಮೃತಿಯೇ ಹೊಸ ಜನ್ಮವನ್ನು ಕೊಟ್ಟಿದೆ, ವೃತ್ತಿ-ದೃಷ್ಟಿ-ಸ್ಮೃತಿಯನ್ನು ಪರಿವರ್ತನೆ ಮಾಡಿದೆ. ಈ ರೀತಿಯ ಸ್ಮೃತಿಗಳು ನೆನಪಿಗೆ ಬರುತ್ತಲೇ ಆತ್ಮಿಕ ಖುಷಿಯ ಹೊಳಪು ನಯನಗಳಲ್ಲಿ, ಮುಖದಲ್ಲಿ ಬರುತ್ತದೆ. ಮಕ್ಕಳಾದ ನೀವು ಸ್ಮೃತಿಗಳನ್ನು ನೆನಪು ಮಾಡುತ್ತೀರಿ  ಮತ್ತು ಭಕ್ತರು ಮಾಲೆಯನ್ನು ಸ್ಮರಣೆ ಮಾಡುತ್ತಾರೆ.

ಒಂದೇ ಸ್ಮೃತಿಯನ್ನು ಅಮೃತವೇಳೆಯಿಂದ ಕರ್ಮಯೋಗಿಗಳಾಗುವ ಸಮಯದ ತನಕ ಪದೇ-ಪದೇ ನೆನಪು ಮಾಡುತ್ತಾ ಇದ್ದಾಗ ಸ್ಮೃತಿಯು ಸಮರ್ಥ ಸ್ವರೂಪವಾಗಿಬಿಡುತ್ತದೆ ಏಕೆಂದರೆ ಎಂತಹ ಸ್ಮೃತಿ ಇರುತ್ತದೆಯೋ ಅಂತಹ ಸಮರ್ಥತೆಯು ಸ್ವತಃವಾಗಿ ಬರುತ್ತದೆ. ಆದ್ದರಿಂದ ಇಂದಿನ ದಿನವನ್ನು ಸ್ಮೃತಿಯ ದಿನದ ಜೊತೆ-ಜೊತೆಗೆ ಸಮರ್ಥತೆಯ ದಿನ ಎಂದು ಹೇಳಲಾಗುತ್ತದೆ. ಬ್ರಹ್ಮಾ ತಂದೆಯ ಎದುರಿಗೆ ಬರುತ್ತಲೇ ತಂದೆಯ ದೃಷ್ಟಿ ಬೀಳುತ್ತಲೇ ಆತ್ಮರಲ್ಲಿ ಸಮರ್ಥತೆ ಬರುತ್ತದೆ. ಎಲ್ಲರೂ ಅನುಭವಿಗಳಾಗಿದ್ದೀರಿ. ಎಲ್ಲರೂ ಅನುಭವಿಗಳಾಗಿದ್ದೀರಲ್ಲವೇ! ಸಾಕಾರ ರೂಪದಲ್ಲಿ ನೋಡಿರಬಹುದು, ಅವ್ಯಕ್ತರೂಪದ ಪಾಲನೆಯಿಂದ ಪಾಲನೆಯನ್ನು ತೆಗೆದುಕೊಳ್ಳುತ್ತಾ ಅವ್ಯಕ್ತ ಸ್ಥಿತಿಯ ಅನುಭವ ಮಾಡುತ್ತಿರಬಹುದು, ಸೆಕೆಂಡಿನಲ್ಲಿ ಮನಸ್ಸಿನಿಂದ ಬಾಪ್‌ದಾದಾ ಎಂದು ಹೇಳಿದಿರಿ ಮತ್ತು ಸಮರ್ಥತೆ ಸ್ವತಃವಾಗಿ ಬಂದುಬಿಡುತ್ತದೆ. ಆದ್ದರಿಂದ ಓ ಸಮರ್ಥ ಆತ್ಮರೇ! ಈಗ ಅನ್ಯ ಆತ್ಮರನ್ನು ತಮ್ಮ ಸಮರ್ಥತೆಯಿಂದ ಸಮರ್ಥರನ್ನಾಗಿ ತಯಾರು ಮಾಡಿರಿ. ಉಲ್ಲಾಸ ಇದೆಯಲ್ಲವೇ! ಉತ್ಸಾಹವಿದೆಯೇ, ಏಕೆಂದರೆ ಅಸಮರ್ಥರನ್ನು ಸಮರ್ಥರನ್ನಾಗಿ ಮಾಡಬೇಕಲ್ಲವೇ! ನಾಲ್ಕೂ ಕಡೆಯ ಬಲಹೀನ ಆತ್ಮರನ್ನು ಸಮರ್ಥರನ್ನಾಗಿ ಮಾಡುವ ಉತ್ಸಾಹವು ಚೆನ್ನಾಗಿದೆ ಎನ್ನುವುದನ್ನು ಬಾಪ್‌ದಾದಾರವರು ನೋಡಿದರು. ಶಿವರಾತ್ರಿಯ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಮಾಡುತ್ತಿದ್ದೀರಿ. ಎಲ್ಲರಿಗೂ ಉತ್ಸಾಹವಿದೆಯಲ್ಲವೇ! ಉತ್ಸಾಹವಿದೆಯೇ? ಯಾರಿಗೆ ನಾವು ಈ ಶಿವರಾತ್ರಿಯಲ್ಲಿ ಅದ್ಭುತವನ್ನು ಮಾಡುತ್ತೇವೆ ಎಂಬ ಉತ್ಸಾಹವಿದೆಯೋ ಅವರು ಕೈಯನ್ನು ಎತ್ತಿರಿ. ಗೊಂದಲವು ಸಮಾಪ್ತಿಯಾಗುವ ರೀತಿ ಅದ್ಭುತವನ್ನು ಮಾಡಿ ತೋರಿಸಬೇಕು.  ವಾಹ್! ವಾಹ್! ಸಮರ್ಥ ಆತ್ಮರೇ ವಾಹ್! ಎಂಬ ಜಯ- ಜಯಕಾರವಾಗಬೇಕು. ಎಲ್ಲಾ ಜೋನಿನವರು ಪ್ರೋಗ್ರಾಮನ್ನು ತಯಾರು ಮಾಡಿಕೊಂಡಿದ್ದೀರಲ್ಲವೇ!  ಪಂಜಾಬಿನವರು ಮಾಡಿದ್ದೀರಲ್ಲವೇ! ಒಳ್ಳೆಯದು .

ಅಲೆದಾಡುತ್ತಿರುವ ಆತ್ಮರಿಗೆ, ಬಾಯಾರಿರುವ ಆತ್ಮರಿಗೆ, ಅಶಾಂತ ಆತ್ಮರಿಗೆ  ಬೊಗಸೆಯಷ್ಟಾದರೂ ಕೊಡಿ. ಏಕೆಂದರೆ ಅವರೂ ಸಹ ನಿಮ್ಮ ಸಹೋದರ-ಸಹೋದರಿಯರಾಗಿದ್ದಾರೆ ಅಂದಾಗ ತಮ್ಮ ಸಹೋದರರ ಮೇಲೆ, ಸಹೋದರಿಯರ ಮೇಲೆ ದಯೆ ಬರುತ್ತದೆಯಲ್ಲವೇ! ನೋಡಿ ಇಂದಿನ ದಿನ ಪರಮಾತ್ಮನನ್ನು ಅಪಾಯದ(ಸಂಕಟದ) ಸಮಯದಲ್ಲಿ ನೆನಪು ಮಾಡುತ್ತಾರೆ ಆದರೆ ಶಕ್ತಿಯರನ್ನು, ದೇವತೆಗಳಲ್ಲಿಯೂ ಗಣೇಶನಿದ್ದಾನೆ, ಹನುಮಂತನಿದ್ದಾನೆ ಮತ್ತು ಇನ್ನೂ ದೇವತೆಗಳನ್ನು ಹೆಚ್ಚಾಗಿ ನೆನಪು ಮಾಡುತ್ತಾರೆ. ಹಾಗಾದರೆ ಅವರೆಲ್ಲಾ ಯಾರಾಗಿದ್ದಾರೆ? ನೀವೇ ಅಲ್ಲವೇ! ನಿಮ್ಮನ್ನು ಪ್ರತಿನಿತ್ಯ ನೆನಪು ಮಾಡುತ್ತಾರೆ - ಹೇ! ಕೃಪಾಳು, ದಯಾಳು ದಯೆ ತೋರಿಸಿ, ಕೃಪೆ ತೋರಿಸಿ ಎಂದು

ಕರೆಯುತ್ತಾರೆ. ಸ್ವಲ್ಪವಾದರೂ ಒಂದು ಸುಖ-ಶಾಂತಿಯ ಹನಿಯನ್ನು ಕೊಡಿರಿ. ತಮ್ಮ ಮುಖಾಂತರ ಒಂದು ಹನಿಯ ಬಾಯಾರಿಕೆಯಲ್ಲಿ ಇದ್ದಾರೆ. ಆದ್ದರಿಂದ ದುಃಖದಿಂದ, ಬಾಯಾರಿರುವ ಆತ್ಮರ ಶಬ್ದ ಹೇ! ಶಕ್ತಿಯರೇ, ಹೇ! ದೇವರೇ ಎಂದು ಕರೆಯುತ್ತಿದ್ದಾರೆ. ಆ ಧ್ವನಿಯು ನಿಮ್ಮ ಬಳಿ ತಲುಪಿಲ್ಲವೇ! ತಲುಪುತ್ತಿದೆಯಲ್ಲವೇ? ಬಾಪ್‌ದಾದಾ ಕರೆಯನ್ನು ಕೇಳಿಸಿಕೊಂಡಾಗ ಶಕ್ತಿಯರನ್ನು ಮತ್ತು ದೇವತೆಯರನ್ನು ನೆನಪು ಮಾಡುತ್ತಾರೆ. ದಾದಿಯರಂತೂ ಒಳ್ಳೆಯ ಕಾರ್ಯಕ್ರಮವನ್ನು ಮಾಡಿದ್ದಾರೆ, ಬಾಬಾರವರಿಗೆ ಇಷ್ಟವಾಗಿದೆ. ನಾಳೆಯಿಂದ ಸ್ಮೃತಿಯ ದಿವಸ ಸದಾಕಾಲಕ್ಕೋಸ್ಕರವಿದೆ, ಆದರೂ ಸಹ ಇಂದಿನ ದಿನ ಸ್ಮೃತಿಯ ಮುಖಾಂತರ ಸರ್ವ ಸಮರ್ಥತೆಗಳನ್ನು ವಿಶೇಷವಾಗಿ ಪ್ರಾಪ್ತಿ ಮಾಡಿಕೊಂಡಿದ್ದೀರಿ. ಈಗ ನಾಳೆಯಿಂದ ಶಿವರಾತ್ರಿಯ ತನಕ ಬಾಪ್‌ದಾದಾ ನಾಲ್ಕೂ ಕಡೆಯ ಮಕ್ಕಳಿಗೆ ಹೇಳುತ್ತಾರೆ - ಮನಸ್ಸಿನ ಮೂಲಕ ವಾಚಾದ ಮೂಲಕ ಅಥವಾ ಸಂಬಂಧ ಸಂಪರ್ಕಗಳ ಮೂಲಕ ಅರ್ಥಾತ್ ಯಾವುದೋ ಒಂದು ವಿಧಿಯ ಮೂಲಕ ಹೆಚ್ಚು ಹೆಚ್ಚಾಗಿ ಆತ್ಮರಿಗೆ ತಂದೆಯ ಸಂದೇಶವನ್ನು ತಪ್ಪದೇ ಕೊಡಬೇಕು. ನಿಮ್ಮ ಮೇಲೀನ ನಿಂದೆಯನ್ನು ತೊಲಗಿಸಿಕೊಳ್ಳಿರಿ. ಈ ವಿಶೇಷ ದಿನ ಇದೇ ಲಕ್ಷ್ಯವನ್ನು ಇಟ್ಟುಕೊಳ್ಳಲು ಹೇಳುತ್ತಿದ್ದಾರೆ. ಈಗ ವಿನಾಶದ ದಿನಾಂಕವಂತೂ ಕಾಣಿಸುತ್ತಿಲ್ಲ, ಎಂದಾದರೂ ಒಂದು ದಿನ ನಿಂದೆಯನ್ನು ಪೂರ್ಣ ಮಾಡಿಕೊಳ್ಳುತ್ತೇವೆ ಎಂದು ಯೋಚಿಸುತ್ತಾರೆ. ಆದರೆ ಆ ರೀತಿ ಆಗಬಾರದು. ಈಗಲೇ ನಿಂದೆಯನ್ನು ತೊಲಗಿಸಿಕೊಳ್ಳಲಿಲ್ಲವೆಂದರೆ- ಮೊದಲೇ ನಮಗೆ ಏಕೆ ಹೇಳಲಿಲ್ಲ ನಾವು ಸಹ ತಯಾರು ಮಾಡಿಕೊಳ್ಳುತ್ತಿದ್ದೆವು. ಈಗ ಕೇವಲ ಅಹೋ! ಪ್ರಭು ಎಂದು ಹೇಳುವುದಷ್ಟೇ ಉಳಿದಿದೆ ಎಂದು ನಿಂದಿಸುತ್ತಾರೆ. ಆದ್ದರಿಂದ ಅವರಿಗೂ ಸ್ವಲ್ಪ ಆಸ್ತಿಯ ಬೊಗಸೆಯನ್ನು ತೆಗೆದುಕೊಳ್ಳುವುದಕ್ಕೆ ಬಿಡಿ. ಅವರಿಗೂ ಸ್ವಲ್ಪ ಸಮಯವನ್ನು ಕೊಡಿ. ಒಂದು ಹನಿಯ ಬಾಯಾರಿಕೆಯನ್ನು ನೀಗಿಸಿರಿ. ಬಾಯಾರಿಕೆಗೋಸ್ಕರ ಒಂದು ಹನಿಯೂ ಬಹಳ ಮಹತ್ವವುಳ್ಳಂತಹದ್ದಾಗಿದೆ. ಅಂದಾಗ ನಾಳೆಯಿಂದ ಬಾಪ್‌ದಾದಾ ಬಟ್ಟೆಯ ಧ್ವಜವಲ್ಲ, ಡಂಗೂರವನ್ನು ಬಾರಿಸುತ್ತಿದ್ದಾರೆ - ಆತ್ಮರಿಗೆ ಹೇ ತೃಪ್ತ(ಸಂತುಷ್ಟ) ಆತ್ಮರೇ! ಸಂದೇಶ ಕೊಡಿ, ಸಂದೇಶ ಕೊಡಿ. ಈ ಕಾರ್ಯಕ್ರಮವನ್ನು ಮಾಡಿರಿ. ಕಡಿಮೆ ಎಂದರೆ ಶಿವರಾತ್ರಿಯಲ್ಲಿ ತಂದೆಯ ಜನ್ಮದಿನದಂದು ಬಾಯಿಯನ್ನು ಸಿಹಿ ಮಾಡಿಕೊಳ್ಳಬೇಕು - ನಮಗೆ ಸಂದೇಶ ಸಿಕ್ಕಿದೆ. ಈ ದಿಲ್ಖುಷ್ ಮಿಠಾಯಿಯನ್ನು ಎಲ್ಲರಿಗೂ ತಿಳಿಸಿರಿ, ತಿನ್ನಿಸಿರಿ. ಸಾಧಾರಣ ಶಿವರಾತ್ರಿಯನ್ನು ಆಚರಣೆ ಮಾಡಬಾರದು. ಸ್ವಲ್ಪ ಚಮತ್ಕಾರವನ್ನು ಮಾಡಿ ತೋರಿಸಬೇಕು. ಉತ್ಸಾಹವಿದೆಯೇ? ಮೊದಲನೆಯ ಸಾಲಿನವರಿಗೆ ಇದೆಯೇ? ಬಹಳ ವಿಜೃಂಭಣೆಯಿಂದ ಮಾಡಿ. ಕಡಿಮೆಯಲ್ಲಿ ಕಡಿಮೆಯಾಗಿ ಶಿವರಾತ್ರಿಗೆ ಎಷ್ಟು ಮಹಿಮೆ ಇದೆ ಎಂದಾದರೂ ಅವರು ತಿಳಿದುಕೊಳ್ಳಬೇಕು. ನಮ್ಮ ತಂದೆಯ ಜನ್ಮದಿನವಾಗಿದೆ ಎಂದು ಕೇಳಿ ಖುಷಿಯನ್ನು ಆಚರಣೆ ಮಾಡಲಿ. ಒಳ್ಳೆಯದು. ಎಷ್ಟು ಜನ ಇಲ್ಲಿ ಕುಳಿತು ಕೊಂಡಿದ್ದೀರಿ? ನಾಲ್ಕೂ ಕಡೆ ಹೋಗಲೇಬೇಕು. ಆದರೂ ಎಷ್ಟು ಜನ ಇಲ್ಲಿ ಕುಳಿತು ಕೊಂಡಿದ್ದೀರಿ? (12 ರಿಂದ 13 ಸಾವಿರ ಜನ) ಒಳ್ಳೆಯದು. ಮದುಬನದವರು ಎನ್ನುತ್ತಾರೆ ನಾವು ಎಲ್ಲಿ ಸಂದೇಶವನ್ನು ಕೊಡಬೇಕು ಎಂದು. ಮದುಬನದವರು ಸುತ್ತಮುತ್ತಲು ಈಗ ಬಹಳಷ್ಟು ಗ್ರಾಮಗಳಿವೆ. ಮೇಲೆ ಅಥವಾ ಕೆಳಗೂ ಬಹಳಷ್ಟು ಜನರಿದ್ದಾರೆ ಅವರೆಲ್ಲರಿಗೂ ಸಂದೇಶವನ್ನು ಕೊಡಬೇಕು. ಆದರೆ ಒಬ್ಬ ಆತ್ಮನನ್ನಾದರು ತನ್ನ ವಾರಸತ್ವವನ್ನು ಪಡೆಯುವ ಯೋಗ್ಯರನ್ನಾಗಿ ತಯಾರು ಮಾಡಿರಿ.

ಎಲ್ಲರೂ ಒಬ್ಬೊಬ್ಬರನ್ನು ತಯಾರು ಮಾಡಿದರೆ 9 ಲಕ್ಷ ಜನರು ಪೂರ್ತಿಯಾಗಿ ಬಿಡುತ್ತಾರೆ. ಸರಿಯೇ? ಮಾಡುತ್ತೀರಾ ಅಥವಾ ಕೇವಲ ಹೇಳುತ್ತೀರಿ ಅಷ್ಟೇನಾ? ಕೇವಲ ಕೈಯನ್ನು ಎತ್ತುವುದಲ್ಲ, ಹೃದಯದಿಂದ ಮಾಡಿರಿ. ಮಾಡುತ್ತೀರಾ? (ನಾರಾಯಣ ಅಣ್ಣನವರನ್ನು ಕೇಳುತ್ತಿದ್ದಾರೆ) ಮಾಡುತ್ತೀರಾ? ಹಾಗಾದರೆ ಹೇಳಿರುವ ಹಾಗೆ 9 ಲಕ್ಷದ ಲಿಸ್ಟ್ ತಯಾರಾಗಿ ಬಿಡುತ್ತದೆ ಅಲ್ಲವೇ. ಹಾಗಾದರೆ ಮುಂಬರುವ ಸೀಸನ್ ನಲ್ಲಿ 6 ಲಕ್ಷ ಜನರಲ್ಲ, 9 ಲಕ್ಷ ಜನರು

ತಯಾರಾಗಿರಬೇಕು ಅಥವಾ ಅಷ್ಟಕ್ಕಿಂತಲೂ ಹೆಚ್ಚು ಜನರೇ ತಯಾರಾಗಿದ್ದಾರೆ ಎಂಬ ಶುಭವಾರ್ತೆಯನ್ನು ಬಾಪ್‌ದಾದಾ ಕೇಳಬೇಕೆಂದುಕೊಳ್ಳುತ್ತಿದ್ದಾರೆ. ಒಳ್ಳೆಯದು. ಶಕ್ತಿಯರು, ಟೀಚರ್ಸ್ ಸರಿಯೇ? ಟೀಚರ್ಸ್ ಅಂತೂ ಬಾಪ್‌ದಾದಾರವರಿಗೆ ಕಂಕಣವನ್ನು ತಯಾರು ಮಾಡಬೇಕಾಗಿರುತ್ತದೆ. ಪಂಜಾಬ್ ಮತ್ತು ರಾಜಸ್ಥಾನ್ ಟೀಚರ್ಸ್ ಅಂತೂ ಬಹಳಷ್ಟು ಜನರನ್ನು ತಯಾರು ಮಾಡಬಲ್ಲಿರಿ. ಆದರೆ ಇತರರಿಗೂ ಸಹ ತಯಾರು ಮಾಡಬೇಕೆಂಬ ಪ್ರೇರಣೆಯನ್ನು ಕೊಡಬೇಕು. ಒಳ್ಳೆಯದು, ಟೀಚರ್ಸ್ ಎಷ್ಟು ಜನರಿದ್ದೀರಿ? ಒಬ್ಬೊಬ್ಬರು ಒಂಬತ್ತು ಜನರನ್ನು ತಯಾರು ಮಾಡಿದರೂ ೨ ಲಕ್ಷ ಜನರು ತಯಾರಾಗಿ ಬಿಡುತ್ತಾರೆ. ಮುಂಬರುವ ಸೀಸನ್ ನಲ್ಲಿ ಈ ಶುಭವಾರ್ತೆಯನ್ನು ಹೇಳುತ್ತೀರಾ? ಏನೆಂದುಕೊಳ್ಳುತ್ತಿದ್ದೀರಿ? (ನಿರ್ವೈರ್) ಅಣ್ಣನವರು ಹೇಳಿರಿ. ಶುಭವಾರ್ತೆಯನ್ನು ಹೇಳುತ್ತೀರಾ? ಆಗುತ್ತದೆಯೇ? ಇದೇನು ದೊಡ್ಡ ವಿಷಯವಲ್ಲ. ೬ ಲಕ್ಷ ಜನರಿದ್ದಾರೆ. ಇನ್ನೂ ಮೂರು ಲಕ್ಷ ಜನರನ್ನು ತಯಾರು ಮಾಡಬೇಕು. ಆಗುತ್ತದೆ ಆದರೆ ಎಲ್ಲರೂ ನಾವು ಮಾಡಲೇಬೇಕು ಎಂಬ ಧೈರ್ಯವನ್ನು ಇಟ್ಟುಕೊಳ್ಳಿರಿ ಸಾಕು. ಏನೆನ್ನುತ್ತೀರಿ, ಮಾಡಲೇಬೇಕು ಎನ್ನಿರಿ. ಸಂಕಲ್ಪ ಶಕ್ತಿ ಬಹಳ ಶ್ರೇಷ್ಠ ಶಕ್ತಿಯಾಗಿದೆ. ಬ್ರಾಹ್ಮಣಾತ್ಮರಾದ ನಿಮ್ಮ ಸಂಕಲ್ಪದಿಂದ ಮಾಡಲಾಗದ ಯಾವುದೇ ಕಾರ್ಯವು ಇಲ್ಲ. ಪ್ರತಿಯೊಬ್ಬರೂ ತಮ್ಮ ಶ್ರೇಷ್ಠ ಸಂಕಲ್ಪದ ಶ್ರೇಷ್ಠತೆಯನ್ನು ಸ್ಮೃತಿಯಲ್ಲಿಟ್ಟುಕೊಳ್ಳಬೇಕು.

ಅಮೃತವೇಳೆ ಮೆಜಾರಿಟಿ ನೆನಪು ಮತ್ತು ಈಶ್ವರೀಯ ಪ್ರಾಪ್ತಿಗಳ ನಶೆ ಬಹಳ ಚೆನ್ನಾಗಿತ್ತು ಎಂಬುದನ್ನು ಬಾಪ್‌ದಾದಾ ನೋಡುತ್ತಿದ್ದರು ಆದರೆ ಕರ್ಮಯೋಗಿಯ ಸ್ಥಿತಿಯಲ್ಲಿ ಮತ್ತು ಅಮೃತವೇಳೆಯ ನಶೆಯಲ್ಲಿ ಸ್ವಲ್ಪ ಅಂತರವು ಬರುತ್ತಿದೆ. ಕಾರಣವೇನಾಗಿದೆ? ಕರ್ಮ ಮಾಡುತ್ತಲೂ ಆತ್ಮಾಭಿಮಾನಿ ಮತ್ತು ಕರ್ಮದ ಅಭಿಮಾನಿ ಎರಡೂ ಇರಬೇಕು. ಕರ್ಮ ಮಾಡುತ್ತಾ ನಾನು ಆತ್ಮನಾಗಿದ್ದೇನೆ ಎನ್ನುವುದೇ ವಿಧಿಯಾಗಿದೆ. ಯಾವ ಆತ್ಮನಾಗಿದ್ದೇನೆ. ಅದನ್ನು ತಿಳಿದುಕೊಂಡಿದ್ದೀರಲ್ಲವೇ, ಯಾವ ಭಿನ್ನ-ಭಿನ್ನ ಆತ್ಮನ ಸ್ವಮಾನವು ಸಿಕ್ಕಿದೆಯೋ ಉದಾಹರಣೆಗೆ ನಾನು ಆತ್ಮ ಕರ್ಮೇಂದ್ರಿಯಗಳ ಮೂಲಕ ಕರ್ಮ ಮಾಡಿಸುವವನು. ಈ ಕರ್ಮೇಂದ್ರಿಯಗಳು ಕರ್ಮಚಾರಿಗಳಾಗಿವೆ. ಆದರೆ ಕರ್ಮಚಾರಿಗಳಿಂದ ಕರ್ಮ ಮಾಡಿಸುವಂತಹ ನಾನು ಮಾಡಿಸುವವನಾಗಿದ್ದೇನೆ. ಅತೀತವಾಗಿದ್ದೇನೆ. ಹೀಗೆ ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ಲೌಕಿಕದಲ್ಲಿಯೂ ವೈದ್ಯನು ತನ್ನ ಸಹಯೋಗಿಗಳೊಂದಿಗೆ ಸೇವೆ ಮಾಡಿಸಲು ನಿಮಿತ್ತವಾಗಿ ಅವರಿಂದ ಸೇವೆಯನ್ನು ಮಾಡಿಸುತ್ತಾರೆ. ಸಲಹೆಯನ್ನು ಕೊಡುತ್ತಾರೆ ಹೀಗೆ ವಿಧಿಯನ್ನು ನಿರ್ವಹಿಸುವ ನಾನು ವೈದ್ಯನು ಎಂಬ ವಿಷಯವನ್ನು ಮರೆತು ಹೋಗುತ್ತಾರೆಯೇ? ಹಾಗೆಯೇ ನಿಮ್ಮನ್ನು ನೀವು ಮಾಡಿಸುವಂತಹ ಶಕ್ತಿಶಾಲಿ ಆತ್ಮನಾಗಿ ಭಾವಿಸಬೇಕು. ಆತ್ಮ ಮತ್ತು ಶರೀರ. ಆತ್ಮ ಅರ್ಥಾತ್ ಮಾಡಿಸುವುದು ಮತ್ತು ಶರೀರವು ಮಾಡುವುದಾಗಿದೆ ಎನ್ನುವ ಈ ಸ್ಮೃತಿ ಮರ್ಜ್(ಗುಪ್ತ) ಆಗುತ್ತದೆ. ತಮ್ಮೆಲ್ಲರಿಗೂ, ಹಳೆಯ ಮಕ್ಕಳಿಗೂ ಸಹ ತಿಳಿದಿದೆ - ಬ್ರಹ್ಮಾತಂದೆಯು ಶುರು-ಶುರುವಿನಲ್ಲಿ ಯಾವ ಅಭ್ಯಾಸವನ್ನು ಮಾಡಿದರು? ಒಂದು ಡೈರಿ ಇತ್ತಲ್ಲವೇ? ಇಡೀ ದಿನದಲ್ಲಿ ನಾನು ಆತ್ಮ, ಜಶೋಧ ಆತ್ಮ, ಈ ಮಗು ಆತ್ಮವಾಗಿದೆ. ಆತ್ಮವಾಗಿದೆ, ಆತ್ಮವಾಗಿದೆ ಎನ್ನುವ ಒಂದೇ ಶಬ್ದವಿತ್ತು. ಈ ಅಡಿಪಾಯದ ಸ್ಥಿತಿಯನ್ನೇ ಸದಾ ಕಾಲಕ್ಕೊಸ್ಕರ ಅಭ್ಯಾಸ ಮಾಡಿದರು. ನಾನು ಯಾರು? ಎಂಬ ಈ ಮೊದಲನೆಯ ಪಾಠವನ್ನು ಪದೇ-ಪದೇ ಅಭ್ಯಾಸ ಮಾಡಬೇಕು. ಚೆಕ್(ಪರಿಶೀಲನೆ) ಮಾಡಿಕೊಳ್ಳಬೇಕು, ನಾನು ಆತ್ಮನಾಗಿದ್ದೇನೆ ಎನ್ನುವುದಲ್ಲ. ನಾನಾತ್ಮ ಮಾಡಿಸುವಂತಹವನಾಗಿ ಕರ್ಮ ಮಾಡಿಸುತ್ತಿದ್ದೇನೆ ಎಂಬ ಅನುಭವವನ್ನು ಮಾಡಿ. ಮಾಡುವವನು ಬೇರೆ ಆಗಿದ್ದಾನೆ. ಮಾಡಿಸುವಂತಹವರು ಬೇರೆ ಆಗಿದ್ದಾರೆ. ಈ ಕರ್ಮೇಂದ್ರಿಯಗಳು ಕರ್ಮಚಾರಿಗಳಾಗಿವೆ ಎನ್ನುವುದು ಬ್ರಹ್ಮಾತಂದೆಯ ಎರಡನೆಯ ಅನುಭವವಾಗಿದೆ. ಇದನ್ನು ಕೇಳಿದ್ದೀರಲ್ಲವೇ. ಆದ್ದರಿಂದ ಪ್ರತಿ ನಿತ್ಯ ರಾತ್ರಿಯ ಕಛೇರಿಯ ಬಗ್ಗೆ ಕೇಳಿದ್ದೀರಲ್ಲವೇ! ಅಂದಾಗ ಮಾಲೀಕರಾಗಿ ಈ ಕರ್ಮೇದ್ರಿಯ ರೂಪಿ ಕರ್ಮಚಾರಿಗಳಿಂದ ಸ್ಥಿತಿ-ಗತಿಯನ್ನು

ಕೇಳುತ್ತಿದ್ದರಲ್ಲವೇ! ಅಂದಾಗ ಹೇಗೆ ಬ್ರಹ್ಮಾ ತಂದೆಯೇ ಈ ಅಭ್ಯಾಸದ ಅಡಿಪಾಯವನ್ನು ಬಹಳ ಪಕ್ಕಾ ಮಾಡಿಕೊಂಡಿದ್ದರು, ಆದ್ದರಿಂದ ಅಂತಿಮದಲ್ಲಿ ಜೊತೆ ಇದ್ದ ಮಕ್ಕಳು ಏನು ಅನುಭವ ಮಾಡಿದರು? ತಂದೆ ಕಾರ್ಯವನ್ನು ಮಾಡುತ್ತಾ ಶರೀರದಲ್ಲಿ ಇದ್ದರೂ ಸಹ ಅಶರೀರಿ ಸ್ಥಿತಿಯಲ್ಲಿ ನಡೆಯುತ್ತಾ-ಓಡಾಡುತ್ತಿರುವ ಅನುಭವವಾಗುತ್ತಿತ್ತು. ಕರ್ಮದ ಲೆಕ್ಕವನ್ನು ಸಮಾಪ್ತಿ ಮಾಡಬೇಕಾಯಿತು. ಆದರೆ ಸಾಕ್ಷಿಯಾಗಿದ್ದರು, ಸ್ವಯಂ ಕರ್ಮದ ಲೆಕ್ಕಾಚಾರಕ್ಕೆ ವಶರಾಗಲಿಲ್ಲ, ಅನ್ಯರ ಕರ್ಮದ ಲೆಕ್ಕಾಚಾರ ಸಮಾಪ್ತಿ ಆಗುವ ಅನುಭವ ಮಾಡಿಸಲಿಲ್ಲ. ಬ್ರಹ್ಮಾ ತಂದೆ ಅವ್ಯಕ್ತರಾಗುವುದು ನಿಮಗೆ ತಿಳಿದಿರಲಿಲ್ಲ, ಗೊತ್ತಿರಲಿಲ್ಲವಲ್ಲವೇ! ಅಂದಾಗ ಅಷ್ಟು ಅತೀತ, ಸಾಕ್ಷಿ, ಅಶರೀರಿ ಅರ್ಥಾತ್ ಕರ್ಮಾತೀತ ಸ್ಥಿತಿಯನ್ನು ಬಹುಕಾಲದಿಂದ ಅಭ್ಯಾಸ ಮಾಡಿರಿ. ಆಗ ಅಂತಿಮದಲ್ಲಿಯೂ ಅದೇ ಸ್ವರೂಪ ಅನುಭವವಾಗುತ್ತದೆ. ಈ ಬಹಳ ಕಾಲದ ಅಭ್ಯಾಸವೇ ಕೆಲಸಕ್ಕೆ ಬರುತ್ತದೆ. ಅಂತಿಮದಲ್ಲಿ ದೇಹಬಾನವನ್ನು ಬಿಡುತ್ತೇವೆ ಎಂದು ಯೋಚಿಸಬೇಡಿ. ಬಹಳ ಕಾಲದ ಆಶರೀರಿತನದ, ದೇಹದಿಂದ ಅತೀತವಾಗುವ ಸ್ಥಿತಿಯ ಅನುಭವವಾಗಬೇಕು. ಅಂತಿಮ ಕಾಲವು ಯುವಕರಿಗಾಗಿರಲಿ, ವೃದ್ಧರಿಗಾಗಿರಲಿ, ಆರೋಗ್ಯವಂತರಿಗಾಗಿರಲಿ, ಕಾಯಿಲೆ ಇರಲಿ, ಯಾರಿಗಾದರೂ ಯಾವಾಗಲಾದರೂ ಬರಬಹುದು. ಆದ್ದರಿಂದ ಬಹಳ ಕಾಲದ ಅಭ್ಯಾಸ ಸಾಕ್ಷಿತನದ್ದಾಗಿದೆ, ಅದರ ಬಗ್ಗೆ ಗಮನವನ್ನು ಕೊಡಬೇಕು. ಎಷ್ಟೇ ಪ್ರಾಕೃತಿಕ ಅಪಾಯಗಳು ಬರಲಿ ಆದರೆ ಈ ಅಶರೀರಿತನದ ಸ್ಥಿತಿ ತಮ್ಮನ್ನು ಸಹಜವಾಗಿ ಅತೀತ ಮತ್ತು ಪ್ರಿಯವನ್ನಾಗಿ ಮಾಡುತ್ತದೆ. ಆದ್ದರಿಂದ ಬಹಳ ಕಾಲದ ಶಬ್ದವನ್ನು ಬಾಪ್‌ದಾದಾ ಅಂಡರ್ಲೈನ್ ಮಾಡಿಸುತ್ತಾರೆ. ಏನೇ ಆಗಲಿ ಇಡೀ ದಿನದಲ್ಲಿ ಸಾಕ್ಷಿತನದ ಸ್ಥಿತಿಯ, ಮಾಡಿಸುವಂತಹ ಸ್ಥಿತಿಯ, ಅಶರೀರಿ ಸ್ಥಿತಿಯ ಅನುಭವವನ್ನು ಪದೇ ಪದೇ ಮಾಡಿ, ಆಗ ಅಂತ್ ಮತಿ ಫರಿಶ್ತಾ ಸೋ ದೇವತೆಗಳಾಗುವುದು ನಿಶ್ಚಿತವಾಗುತ್ತದೆ. ತಂದೆಯ ಸಮಾನವಾಗಬೇಕಾದರೆ ತಂದೆ ನಿರಾಕಾರ ಮತ್ತು ಫರಿಶ್ತೆ ಆಗಿದ್ದರು. ಬ್ರಹ್ಮಾ ತಂದೆಯ ಸಮಾನರಾಗಬೇಕು ಅರ್ಥಾತ್ ಫರಿಶ್ತಾ ಸ್ಥಿತಿಯಲ್ಲಿ ಇರಬೇಕು. ಫರಿಶ್ತಾ ಸ್ವರೂಪವನ್ನು ಸಾಕಾರ ಬ್ರಹ್ಮಾ ತಂದೆಯಲ್ಲಿ ನೋಡಿದ್ದೀರಲ್ಲವೇ? ಅನೇಕ ವಿಷಯಗಳನ್ನು ಕೇಳುತ್ತಾ, ಮಾತನಾಡುತ್ತಾ, ಕಾರ್ಯ-ವ್ಯವಹಾರ ಮಾಡುತ್ತಾಲೂ, ತಂದೆಯು ಶರೀರದಲ್ಲಿ ಇದ್ದರೂ ಶರೀರದಿಂದ ಅತೀತ ಎನ್ನುವ ಅನುಭವವನ್ನು ಮಾಡಿದರು. ಕಾರ್ಯವನ್ನು ಬಿಟ್ಟು ಅಶರೀರಿಗಳಾಗುವುದು ಸ್ವಲ್ಪ ಸಮಯಕ್ಕೋಸ್ಕರ ಮಾತ್ರ ಸಾಧ್ಯ. ಆದರೆ ಕಾರ್ಯ ಮಾಡುತ್ತಾ, ಅಶರೀರಿಗಳಾಗಲು ಸಮಯವನ್ನು ತೆಗೆದು ಶಕ್ತಿಶಾಲಿ ಸ್ಥಿತಿಯ ಅನುಭವ ಮಾಡಬೇಕು. ತಾವೆಲ್ಲರೂ ಫರಿಶ್ತೆಗಳಾಗಿದ್ದೀರಿ. ತಂದೆಯ ಮುಖಾಂತರ ಈ ಬ್ರಾಹ್ಮಣ ಜೀವನದ ಆಧಾರವನ್ನು ತೆಗೆದುಕೊಂಡು ಸಂದೇಶ ಕೊಡುವುದುಕ್ಕೋಸ್ಕರ ಸಾಕಾರದಲ್ಲಿ ಕಾರ್ಯ ಮಾಡುತ್ತಿದ್ದೀರಿ, ಫರಿಶ್ತಾ ಅರ್ಥಾತ್ ದೇಹದಲ್ಲಿದ್ದರೂ ದೇಹದಿಂದ ಅತೀತ ಮತ್ತು ಈ ಉದಾಹರಣೆಯನ್ನು ಬ್ರಹ್ಮಾ ತಂದೆಯಲ್ಲಿ ನೋಡಿದಿರಿ, ಅಸಂಭವವಲ್ಲ, ನೋಡಿದ್ದೀರಿ, ಅನುಭವ ಮಾಡಿದ್ದೀರಿ. ಈಗ ವಿಸ್ತಾರ ಜಾಸ್ತಿ ಇದೆ. ಆದರೆ ಎಷ್ಟು ಬ್ರಹ್ಮಾತಂದೆಗೆ ಹೊಸ ಜ್ಞಾನ, ಹೊಸ ಜೀವನ, ಹೊಸ ಪ್ರಪಂಚವನ್ನು ಸ್ಥಾಪಿಸುವ ಜವಾಬ್ದಾರಿ ಇತ್ತು, ಅಷ್ಟು ಜವಾಬ್ದಾರಿ ಈಗ ಯಾರಿಗೂ ಇಲ್ಲ. ಆದ್ದರಿಂದ ಎಲ್ಲರ ಲಕ್ಷ್ಯವು ಬ್ರಹ್ಮಾತಂದೆಯ ಸಮಾನರಾಗುವುದು ಎಂದಿರಬೇಕು. ಅರ್ಥಾತ್ ಫರಿಶ್ತಾ ಆಗುವುದಾಗಿದೆ. ಶಿವತಂದೆಯ ಸಮಾನರಾಗುವುದು ಎಂದರೆ ನಿರಾಕಾರ ಸ್ಥಿತಿಯಲ್ಲಿ ಸ್ಥಿತರಾಗುವುದಾಗಿದೆ. ಶ್ರಮವಾಗುತ್ತದೆಯೇ? ತಂದೆ ಮತ್ತು ಅಣ್ಣನೊಂದಿಗೆ ಪ್ರೀತಿ ಇದೆಯಲ್ಲವೇ! ಹಾಗಾದರೆ ಯಾರ ಮೇಲೆ ಪ್ರೀತಿ ಇದೆಯೋ ಅವರ ರೀತಿ ಆಗಬೇಕು. ತಂದೆಯ ಸಮಾನ ಆಗಲೇಬೇಕು ಎನ್ನುವ ಸಂಕಲ್ಪ ಇದ್ದಾಗ ಶ್ರಮವೆನಿಸುವುದಿಲ್ಲ. ಕೇವಲ ಪದೇ-ಪದೇ ಗಮನ ಕೊಡಿ. ಸಾಧಾರಣ ಜೀವನವಲ್ಲ. ಸಾಧಾರಣ ಜೀವನವನ್ನು ಜೀವಿಸುವಂತಹವರು ಬಹಳಷ್ಟು ಇದ್ದಾರೆ. ದೊಡ್ಡ- ದೊಡ್ಡ ಕಾರ್ಯ ಮಾಡುವಂತಹವರೂ ಸಹ ಬಹಳಷ್ಟು ಇದ್ದಾರೆ. ಆದರೆ ತಮ್ಮ ರೀತಿಯ ಕಾರ್ಯವನ್ನು ತಾವು ಬ್ರಾಹ್ಮಣ ಆತ್ಮರನ್ನು ಬಿಟ್ಟರೆ ಬೇರೆ ಯಾರೂ ಮಾಡಲು ಸಾಧ್ಯವಿಲ್ಲ.

ಇಂದು ಸ್ಮೃತಿಯ ದಿವಸದಂದು ಬಾಪ್‌ದಾದಾರವರ ಸಮಾನರಾಗುವುದರಲ್ಲಿ ಸಮೀಪ ಬನ್ನಿ, ಸಮೀಪ ಬನ್ನಿ, ಸಮೀಪ ಬನ್ನಿ ಎನ್ನುವ ವರದಾನವನ್ನು ಕೊಡುತ್ತಿದ್ದಾರೆ. ಎಲ್ಲರೂ ಹದ್ದಿನಿಂದ ದೂರ, ಸಂಕಲ್ಪ, ಮಾತು, ಕರ್ಮ, ಸಂಬಂಧ-ಸಂಪರ್ಕ ಎಲ್ಲಾ ಹದ್ದಿನ ತೀರಗಳಿಂದ ತಮ್ಮ ಮನಸ್ಸಿನ ದೋಣಿಯನ್ನು ದೂರ ಮಾಡಿ ಮುಕ್ತ ಮಾಡಬೇಕು. ಈಗಿನಿಂದಲೇ ಜೀವನದಲ್ಲಿ ಇದ್ದೂ ಮುಕ್ತ. ಆ ರೀತಿ ಜೀವನ್ಮುಕ್ತಿಯ ಬಹಳ ಕಾಲದ ಅಲೌಕಿಕ ಅನುಭವವನ್ನು ಮಾಡಬೇಕು. ಒಳ್ಳೆಯದು. ನಾಲ್ಕಾರೂ ಕಡೆಯ ಮಕ್ಕಳ ಬಹಳ ಪತ್ರಗಳು ಸಿಕ್ಕಿದೆ ಮತ್ತು ಮಧುಬನದವರ ಕ್ರೋಧಮುಕ್ತ ರಿಪೋರ್ಟ್, ಸಮಾಚಾರ ಬಾಪ್‌ದಾದಾರವರ ಬಳಿ ತಲುಪಿದೆ. ಬಾಪ್‌ದಾದಾ ಧೈರ್ಯವನ್ನು ನೋಡಿ ಖುಷಿಯಾಗುತ್ತಿದ್ದಾರೆ ಮತ್ತು ಇನ್ನು ಮುಂದೆಗಾಗಿ ಸದಾ ಮುಕ್ತರಾಗುವುದಕ್ಕೋಸ್ಕರ ಸಹನ ಶಕ್ತಿಯ ಕವಚವನ್ನು ಹಾಕಿಕೊಳ್ಳಬೇಕು. ಆಗ ಯಾರು ಎಷ್ಟೇ ಪ್ರಯತ್ನಪಟ್ಟರೂ ತಾವು ಸದಾ ಸುರಕ್ಷಿತವಾಗಿರುತ್ತೀರಿ.

**ಈ ರೀತಿ ಸರ್ವ ಧೃಡ ಸಂಕಲ್ಪಧಾರೀ, ಸದಾ ಸ್ಮೃತಿ ಸ್ವರೂಪ ಆತ್ಮರಿಗೆ, ಸದಾ ಸರ್ವ ಸಮರ್ಥತೆಗಳನ್ನು ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸುವಂತಹ ವಿಶೇಷ ಆತ್ಮರಿಗೆ, ಸದಾ ಸರ್ವ ಆತ್ಮರ ಮೇಲೆ ದಯಾ ಹೃದಯಿ ಆತ್ಮರಿಗೆ, ಸದಾ ಬಾಪ್‌ದಾದಾರವರ ಸಮಾನರಾಗುವ ಸಂಕಲ್ಪವನ್ನು ಸಾಕಾರ ರೂಪದಲ್ಲಿ ತರುವಂತಹ ಈ ರೀತಿ ಬಹಳ-ಬಹಳ-ಬಹಳ ಪ್ರಿಯ ಮತ್ತು ಅತೀತ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಮತ್ತು ನಮಸ್ತೆ.**

ಡಬಲ್ ವಿದೇಶಿಯರು: ಡಬಲ್ ವಿದೇಶಿಯರಿಗೆ ಡಬಲ್ ನಶೆ ಇದೆ. ಏಕೆ ಡಬಲ್ ನಶೆ ಇದೆ? ಏಕೆಂದರೆ ಹೇಗೆ ತಂದೆ ದೂರದೇಶದವರಾಗಿದ್ದಾರೆ ಹಾಗೆಯೇ ನಾವು ದೂರದೇಶದಿಂದ ಬಂದಿದ್ದೇವೆ ಎಂದು ತಿಳಿದುಕೊಳ್ಳುತ್ತಾರೆ. ಬಾಪ್‌ದಾದಾ ಡಬಲ್ ವಿದೇಶಿ ಮಕ್ಕಳ ಒಂದು ವಿಶೇಷತೆಯನ್ನು ನೋಡಿದರು - ದೀಪದಿಂದ-ದೀಪವನ್ನು ಬೆಳಗುತ್ತಾ ಅನೇಕ ದೇಶಗಳಲ್ಲಿ ಬಾಪ್‌ದಾದಾರವರ ಜಾಗೃತರಾಗಿರುವ ದೀಪಗಳ ದೀಪಾವಳಿಯನ್ನು ಆಚರಣೆ ಮಾಡಿದರು. ಈಗಲೂ ಸಹ ಎಷ್ಟು ದೇಶದವರು ಬಂದಿದ್ದಾರೆ ಎಂದು ಕೇಳಿದರು. 35 ದೇಶದವರು ಬಂದಿದ್ದಾರೆ. ಈ ಸರಿದಿಯಲ್ಲಿ ಮತ್ತು ಹೊರಗೆ ಇನ್ನೆಷ್ಟು ಇದ್ದಾರೆ? ಅಂದಾಗ ಡಬಲ್ ವಿದೇಶಿಯರಿಗೆ ಸಂದೇಶ ಕೊಡುವ ಆಸಕ್ತಿ ಚೆನ್ನಾಗಿದೆ. ಪ್ರತಿಯೊಂದು ಗ್ರೂಪಿನಲ್ಲಿ 35-40 ದೇಶಗಳು ಬರುವುದನ್ನು ಬಾಪ್‌ದಾದಾ ನೋಡಿದರು. ಶುಭಾಶಯಗಳು, ಸದಾ ಸ್ವಯಂ ಹಾರುತ್ತಿರಿ ಮತ್ತು ಫರಿಶ್ತೆಗಳಾಗಿ ಹಾರುತ್ತಾ-ಹಾರುತ್ತಾ ಸಂದೇಶವನ್ನು ಕೊಡಿ. ಒಳ್ಳೆಯದು. ತಾವು 35 ದೇಶದವರನ್ನು ಬಾಪ್‌ದಾದಾ ನೋಡುತ್ತಿಲ್ಲ. ಬೇರೆಲ್ಲಾ ದೇಶದವರನ್ನು ತಮ್ಮ ಜೊತೆ ನೋಡುತ್ತಿದ್ದಾರೆ ಅಂದಾಗ ನಂಬರ್‌ವನ್ ತಂದೆಯ ಸಮಾನ ಆಗುವಂತಹವರು ಆಗಿದ್ದೀರಲ್ಲವೇ! ನಂಬರ್‌ವನ್ ಆಗಿದ್ದೀರಾ ಅಥವಾ ನಂಬರ್‌ವಾರ್ ಆಗುವಂತಹವರಾಗಿದ್ದೀರಾ? ನಂಬರ್‌ವನ್? ನಂಬರ್‌ವಾರ್‌ರಲ್ಲ. ನಂಬರ್‌ವನ್ ಆಗುವುದು ಎಂದರೆ ಪ್ರತಿಯೊಂದು ಸಮಯ ವಿಜಯಿಯಾಗುವಂತಹವರು. ಯಾರು ವಿಜಯಿಯಾಗುತ್ತಾರೋ ಅವರೇ ನಂಬರ್‌ವನ್ ಆಗುತ್ತಾರೆ. ಆ ರೀತಿ ಇದ್ದೀರಲ್ಲವೇ? ಬಹಳ ಒಳ್ಳೆಯದು. ವಿಜಯಿಯಾಗಿ ಮತ್ತು ಸದಾ ವಿಜಯಿಯಾಗುವಂತಹವರು. ಒಳ್ಳೆಯದು. ಬೇರೆಲ್ಲರಿಗೂ ಎಲ್ಲೆಲ್ಲಿ ಹೋದರೂ ಈ ಸ್ಮೃತಿಯನ್ನು ಕೊಡಿಸಬೇಕು - ಎಲ್ಲಾ ಡಬಲ್ ವಿದೇಶಿಗಳು ನಂಬರ್‌ವನ್ ಆಗಬೇಕು.

ಒಳ್ಳೆಯದು, ಬಾಪ್‌ದಾದಾ ಎಲ್ಲಾ ಮಾತೆಯರಿಗೂ, ಗೋಪಾಲನ ಪ್ರೀತಿ ಮಾತೆಯರಿಗೆ ಬಹಳ-ಬಹಳ ಹೃದಯದಿಂದ ನೆನಪು-ಪ್ರೀತಿಯನ್ನು ಕೊಡುತ್ತಿದ್ದಾರೆ ಮತ್ತು ಪಾಂಡವರು ಯುವಕರಾಗಿರಬಹುದು, ಪ್ರವೃತ್ತಿಯಲ್ಲಿ ಇರುವಂತಹವರಾಗಿರಬಹುದು, ಪಾಂಡವರು ಸದಾ ಪಾಂಡವಪತಿಯ ಜೊತೆಯಲ್ಲಿ ಇರಬೇಕು, ಆ ರೀತಿ ಜೊತೆಗಾರ ಪಾಂಡವರಿಗೆ ಬಾಪ್‌ದಾದಾ ಬಹಳ-ಬಹಳ ನೆನಪು ಪ್ರೀತಿಯನ್ನು ಕೊಡುತ್ತಿದ್ದಾರೆ.

ದಾದಿಯರ ಜೊತೆ: ಇಂದಿನ ದಿನ ಏನು ನೆನಪಿಗೆ ಬರುತ್ತದೆ? ವಿಲ್ಪವರ್ ಸಿಕ್ಕಿತಲ್ಲವೇ! ವಿಲ್ ಪವರ್ ನ ವರದಾನವಾಗಿದೆ. ಬಹಳ ಒಳ್ಳೆಯ ಪಾತ್ರ ಮಾಡಿದಿರಿ ಅದಕ್ಕೋಸ್ಕರ ಶುಭಾಶಯಗಳು. ಎಲ್ಲರ ಆಶೀರ್ವಾದ ತಮಗೆ ಬಹಳಷ್ಟು ಇದೆ. ತಮ್ಮನ್ನು ನೋಡಿ ಎಲ್ಲರೂ ಖುಷಿ ಆಗುತ್ತಾರೆ. ಮಾತನಾಡಿ ಅಥವಾ ಮಾತನಾಡದೆ ಇರಿ. ತಮಗೆ ಏನಾದರೂ ಆದರೆ ನಮಗೆ ಆಗುತ್ತಿದೆ ಎಂದು ಎಲ್ಲರೂ ತಿಳಿದುಕೊಳ್ಳುತ್ತಾರೆ. ಅಷ್ಟು ಪ್ರೀತಿ ಇದೆ. ಎಲ್ಲರಿಗೂ ಬಹಳ ಪ್ರೀತಿ ಇದೆ. ಈ ಪ್ರೀತಿಯೇ ಎಲ್ಲರನ್ನು ನಡೆಸುತ್ತಿದೆ. ಧಾರಣೆ ಕಡಿಮೆ ಇರಲಿ ಅಥವಾ ಜಾಸ್ತಿ ಇರಲಿ ಆದರೆ ಪ್ರೀತಿಯಂತೂ ನಡೆಸುತ್ತಿದೆ. ಬಹಳ ಒಳ್ಳೆಯದು.

ಈಶೂ ದಾದಿಯ ಜೊತೆ: ಇವರೂ ಸಹ ಲೆಕ್ಕವನ್ನು ಸಮಾಪ್ತಿ ಮಾಡಿದರು. ಯಾವುದೇ ಮಾತು ಇಲ್ಲ. ಇವರ ಸಹಜ ಪುರುಷಾರ್ಥ, ಸಹಜ ಲೆಕ್ಕ ಸಮಾಪ್ತಿ. ಸಹಜವಾಯಿತು. ಮಲಗಿಕೊಳ್ಳುತ್ತಾ, ಮಲಗಿಕೊಳ್ಳುತ್ತಾ ವಿಷ್ಣುವಿನ ರೀತಿ ವಿಶ್ರಾಂತಿ ಸಿಕ್ಕಿತು. ಒಳ್ಳೆಯದು. ಆದರೂ ಸಹ ಸಾಕಾರದಿಂದ ಇಲ್ಲಿಯ ತನಕ ಯಜ್ಞದ ರಕ್ಷಕರಾಗಿದ್ದಾರೆ ಅಂದಾಗ ಯಜ್ಞದ ರಕ್ಷಕರಾಗಿರುವವರಿಗೆ ಬಹಳ ಆಶೀರ್ವಾದಗಳು ಸಿಗುತ್ತದೆ.

ಎಲ್ಲಾ ದಾದಿಯರು ಬಾಪ್‌ದಾದಾರವರಿಗೆ ಬಹಳ-ಬಹಳ  ಸಮೀಪ ಇದ್ದಾರೆ. ಸಮೀಪರತ್ನವಾಗಿದ್ದಾರೆ ಮತ್ತು ಎಲ್ಲರಿಗೂ ದಾದಿಯರ ಬೆಲೆ ಇದೆ. ಸಂಘಟನೆಯು ಚೆನ್ನಾಗಿದೆ. ತಾವು ದಾದಿಯರ ಸಂಘಟನೆ ಇಷ್ಟು ವರ್ಷ ಯಜ್ಞದ ರಕ್ಷಣೆ ಮಾಡಿದಿರಿ ಮತ್ತು ಮಾಡುತ್ತೀರಿ. ಈ ಏಕತೆ ಎಲ್ಲಾ ಸಫಲತೆಗೆ ಆಧಾರವಾಗಿದೆ. ತಂದೆಯನ್ನು ಮಧ್ಯದಲ್ಲಿ ಇಟ್ಟಿದ್ದಾರೆ. ಈ ಗಮನವನ್ನು ಬಹಳ ಚೆನ್ನಾಗಿ ಇಟ್ಟಿದ್ದಾರೆ. ಒಳ್ಳೆಯದು. ಎಲ್ಲರೂ ಚೆನ್ನಾಗಿದ್ದೀರಾ.

ರಿವೈಸ್ ಕೋರ್ಸ್ 18-01-2003.
***ಬ್ರಾಹ್ಮಣ ಜನ್ಮದ ಸ್ಮೃತಿಗಳ ಮುಖಾಂತರ ಸಮರ್ಥರಾಗಿ ಸರ್ವರನ್ನು ಸಮರ್ಥರನ್ನಾಗಿ ತಯಾರು ಮಾಡಿರಿ.***

ಅಲೆದಾಡುತ್ತಿರುವ ಆತ್ಮರಿಗೆ,  ಬಾಯಾರಿರುವ ಆತ್ಮರಿಗೆ, ಅಶಾಂತ ಆತ್ಮರಿಗೆ ಬೊಗಸೆಯಷ್ಟಾದರೂ ಕೊಡಿ ಏಕೆಂದರೆ ಅವರು ಸಹ ನಿಮ್ಮ ಸಹೋದರ ಸಹೋದರಿಯರಾಗಿದ್ದಾರೆ.  ನಿಮ್ಮ ಸಹೋದರ ಸಹೋದರಿಯರ ಮೇಲೆ ನಿಮಗೆ ದಯೆ ಬರುತ್ತಿಲ್ಲವೇ? ಇಂದಿನ ದಿನ ಪರಮಾತ್ಮನನ್ನು ಸಂಕಟದ ಸಮಯದಲ್ಲಿ ನೆನಪು ಮಾಡುತ್ತಾರೆ ಆದರೆ ಶಕ್ತಿಯರನ್ನು ದೇವತೆಗಳಲ್ಲಿಯೂ ಗಣೇಶನಿದ್ದಾನೆ, ಹನುಮಂತರನ್ನು ಹೆಚ್ಚಾಗಿ ನೆನಪು ಮಾಡುತ್ತಾರೆ ಹಾಗಾದರೆ ಅವರೆಲ್ಲ ಯಾರಾಗಿದ್ದಾರೆ? ನೀವೇ ತಾನೇ. ನಿಮ್ಮನ್ನು ಪ್ರತಿನಿತ್ಯ ನೆನಪು ಮಾಡುತ್ತಾರೆ. ಸಂಕಲ್ಪ ಶಕ್ತಿ ಬಹಳ ಶ್ರೇಷ್ಠ ಶಕ್ತಿಯಾಗಿದೆ. ಬ್ರಾಹ್ಮಣಾತ್ಮರಾದ ನಿಮ್ಮ ಸಂಕಲ್ಪ ಮಾಡಲಾಗದೆ ಇರುವಂತಹದ್ದು ಏನಿದೆ? ಪ್ರತಿಯೊಬ್ಬರೂ ತಮ್ಮ ಶ್ರೇಷ್ಠ ಸಂಕಲ್ಪದ ಶ್ರೇಷ್ಠತೆಯನ್ನು ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ನಾನು ಆತ್ಮ ಕರ್ಮೇಂದ್ರಿಯಗಳ ಮೂಲಕ ಕರ್ಮವನ್ನು ಮಾಡಿಸುತ್ತಿದ್ದೇನೆ. ಅತೀತವಾದ ಆತ್ಮನಾಗಿದ್ದೇನೆ. ಹೀಗೆ ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ಬಹಳ ಕಾಲದ ಅಭ್ಯಾಸವೇ ಅಂತಿಮದಲ್ಲಿ ಕೆಲಸಕ್ಕೆ ಬರುತ್ತದೆ ಎಂದು ತಿಳಿಸುತ್ತಾ ಬಾಪ್‌ದಾದಾ ತನ್ನ ಸರ್ವಸ್ನೆಹಿ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಆದಿಯಿಂದ ಇಲ್ಲಿಯವರೆಗೆ ಬಾಪ್‌ದಾದಾ ಯಾವ ಸ್ಮೃತಿಗಳನ್ನು ಕೊಟ್ಟಿದ್ದಾರೆಯೋ ಆ ಸ್ಮೃತಿಗಳ ಮಾಲೆಯನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ.

2. ನಾನು ಯಾರು ಎಂಬ ಮೊದಲ ಸ್ಮೃತಿಯು ನನಗೆ ಹೊಸ ಜನ್ಮವನ್ನು ಕೊಟ್ಟಿದೆ ಮತ್ತು ವೃತ್ತಿ, ದೃಷ್ಟಿ ಮತ್ತು ಸ್ಮೃತಿಯನ್ನು ಪರಿವರ್ತನೆ ಮಾಡಿದೆ.

3. ನಾನು ನನ್ನ ಸಮರ್ಥತೆಯ ಮೂಲಕ ಇತರ ಆತ್ಮರನ್ನು ಸಮರ್ಥವಾಗಿ ತಯಾರು ಮಾಡಿದ್ದೇನೆ.

4. ನಾನು ಮನಸ್ಸಿನ ಮೂಲಕ ಅಥವಾ ವಾಚಾದ ಮೂಲಕ ಅಥವಾ ಸಂಬಂಧ ಸಂಪರ್ಕಗಳ ಮೂಲಕ ಹೆಚ್ಚು ಆತ್ಮರಿಗೆ ತಂದೆಯ ಸಂದೇಶವನ್ನು ಕೊಟ್ಟು ನನ್ನ ಮೇಲೆ ಇರುವ ನಿಂದೆಯನ್ನು ತೊಲಗಿಸಿಕೊಂಡಿದ್ದೇನೆ.

5. ನಾನು ನನ್ನ ಶ್ರೇಷ್ಠ ಸಂಕಲ್ಪ ಶಕ್ತಿಯ ಶ್ರೇಷ್ಠತೆಯನ್ನು ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

6. ನಾನು ಆತ್ಮ ಕರ್ಮೇಂದ್ರಿಯಗಳ(ಕರ್ಮಚಾರಿಗಳ) ಮೂಲಕ ಕರ್ಮವನ್ನು ಮಾಡಿಸುವಂತಹವನು, ಅತೀತವಾದ ಆತ್ಮನು ಎಂದು ಸ್ಮೃತಿಯಲ್ಲಿಟ್ಟು ಕೊಂಡಿದ್ದೇನೆ.

7. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಬಹಳ ಕಾಲದಿಂದ ಅತೀತವಾದ ಸಾಕ್ಷಿ ಸ್ಥಿತಿ, ಅಶರೀರಿ, ಮಾಡಿಸುವಂತಹ ಸ್ಥಿತಿಯ ಅಭ್ಯಾಸವನ್ನು ಮಾಡಿ ಅಂತಮತಿ, ಫರಿಶ್ತಾದಿಂದ ದೇವತೆಯಾಗುವ ಸ್ಥಿತಿಯನ್ನು ನಿಶ್ಚಿತ ಮಾಡಿಕೊಂಡಿದ್ದೇನೆ.

8. ನಾನು ಶಿವ ತಂದೆಯ ಸಮಾನವಾಗಿ ನಿರಾಕಾರ ಸ್ಥಿತಿಯಲ್ಲಿದ್ದು, ಬ್ರಹ್ಮಾ ತಂದೆಯ ಸಮಾನವಾಗಿ ಫರಿಶ್ತಾ ಆಗುವ ಲಕ್ಷ್ಯದಿಂದ ಇದ್ದೇನೆ.

9. ನಾನು ಬಾಪ್‌ದಾದಾರವರ ಸಮಾನವಾಗುವುದರಲ್ಲಿ ಸಮೀಪವಾಗಿ ಬನ್ನಿರಿ ಎಂಬ ವರದಾನವನ್ನು ನನಗೆ ತಂದೆ ಕೊಟ್ಟಿದ್ದಾರೆ.

10. ನಾನು ಸಂಕಲ್ಪ, ಮಾತು, ಕರ್ಮ, ಸಂಬಂಧ ಸಂಪರ್ಕಗಳಲ್ಲಿ ಹದ್ದಿನ ತೀರಗಳಿಂದ ಮುಕ್ತನಾಗಿ ಅರ್ಥಾತ್ ಜೀವನ್ ಮುಕ್ತಿಯ ಅಲೌಕಿಕ ಅನುಭವವನ್ನು ಬಹಳ ಕಾಲದಿಂದ ಮಾಡಿದ್ದೇನೆ.

11. ನಾನು ಕ್ರೋದ ಮುಕ್ತ ಸ್ಥಿತಿಯಿಂದ ಮುಕ್ತವಾಗಿರುವುದಕ್ಕಾಗಿ ಸಹನ ಶಕ್ತಿಯ ಕವಚವನ್ನು ಧರಿಸಿಕೊಂಡಿದ್ದೇನೆ.